MYSORE LEGISLATIVE ASSEMBLY

TWENTY-FIRST DAY

Monday, 15th March 1954

The House met in the Assembly Hall, Old Public Offices, Bangalore, at Twelve of the Clock.

MR. DEPUTY SPEAKER (Sri R. CHANNIGARAMIAH) in the Chair.

QUESTIONS AND ANSWERS

Lift Irrigation Pumps (Hassan and other Districts)

Q.—38. **Sri B. N. BORANNA GOWDA** (Belur).—

Will the Government be pleased to state :—

(*a*) the number of lift irrigation pumps that were satisfactorily working during the year 1953-54 (districtwar details to be furnished) ;

(*b*) the number of applications received requesting for the supply of power for lift irrigation during the year 1952-53 in Hassan District ;

(*c*) the steps taken thereon ;

(*d*) whether they intend to supply power for lift irrigation in places where there is scarcity of food ;

(*e*) the number of applications received from Halebid taluk in Hassan District ?

A.—**Dr. R. NAGAN GOWDA** (Minister for Agriculture).—

(*a*)

	District	*No. of pumps working to end of December 1953.*
1.	Mysore ...	210
2.	Mandya ...	62
3.	Bangalore ...	1,585
4.	Tumkur ...	725
5.	Chickmagalur ...	16
6.	Hassan ...	38
7.	Shimoga ...	98
8.	Chitaldrug ...	632
9.	Kolar ...	1,973
	Total	5,339

(*b*) 180.

(*c*) Estimates have been prepared for all the applications, of which 33 have been sanctioned. The estimates for the balance of 147 are under scrutiny.

(*d*) Yes, to the extent possible.

(*e*) The number of applications in Halebid village is 2.

ಶ್ರೀ ಬಿ. ಎಚ್. ಬೋರಣ್ಣಗೌಡ.–ಚಿಕ್ಕಮಗಳೂರು-ಹಾಸನ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ lift irrigation ಪಂಪುಗಳ ಸಂಖ್ಯೆ ಸಾಕಾದಷ್ಟಿದೆಯೆಂದು ತಮ್ಮ ಅಭಿಪ್ರಾಯವೇ ?

ಡಾ॥ ಆರ್. ನಾಗನಗೌಡ.—ಅಷ್ಟೇ ಸಾಕು ಎಂದು ಹೇಳಲು ಹೇಗೆ ಸಾಧ್ಯ ? ಇನ್ನೂ ಹೆಚ್ಚು ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಎಷ್ಟು ವರ್ಷಗಳ ಕಾಲದಲ್ಲಿ ಈ ಜಿಲ್ಲೆಗಳು ಕೋಲಾರ ಜಿಲ್ಲೆಗೆ ಒದಗಿಸಿರುವ ಪಂಪುಗಳ ಸಂಖ್ಯೆಗೆ ಬರಲು ಸಾಧ್ಯ ?

ಡಾ॥ ಆರ್. ನಾಗನಗೌಡ.—ತಮಗೇ ಗೊತ್ತಿರುವ ಹಾಗೆ ಕೋಲಾರ ಜಿಲ್ಲೆಯಲ್ಲಿ ಒಳ್ಳೆ ರೈತರಿದ್ದಾರೆ. ಅಲ್ಲದೆ, ಅಲ್ಲಿ ಚಿಕ್ಕಮಗಳೂರು ಹಾಸನದ ಜಿಲ್ಲೆಗಳಲ್ಲಿದ್ದಷ್ಟು ಮಳೆ ಇಲ್ಲ. ಅಲ್ಲಿ ಕ್ಷಾಮ ಪರಿಸ್ಥಿತಿ ವಿಶೇಷವಾಗಿದ್ದುದರಿಂದ ಅದಕ್ಕೆ ಪರಿಹಾರಾರ್ಥವಾಗಿ ಇಷ್ಟೊಂದು ಪಂಪುಗಳನ್ನು ಕೊಡಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—180 ಅರ್ಜಿಗಳು ಬಂದಿದ್ದರೂ 33 ಅರ್ಜಿಗಳ ಬಗ್ಗೆ ಮಾತ್ರ ಮಂಜೂರಾತಿ ದೊರೆತಿದೆ. ಬಾಕಿ ಅರ್ಜಿಗಳ ಬಗ್ಗೆ ಮಂಜೂರಾತಿಯನ್ನು ಜಾಗ್ರತೆಗೊಳಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಈ ಮಂಜೂರಾತಿ ದೊರೆತು ಕೇವಲ 5-6 ವಾರಗಳಾಗಿವೆ. ಇದಾದ ತರುವಾಯ ಇನ್ನುಳಿದಿರುವ 147ರ ಪೈಕಿ ಇನ್ನೊಂದು 40ಕ್ಕೆ ಮಂಜೂರಾತಿ ದೊರೆತಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಸನ ಜಿಲ್ಲೆಯಲ್ಲಿ ಮಳೆ ಕಡಮೆಯಾಗಿ ಫಸಲು ಆಗದೇ ಇರುವ ಪ್ರದೇಶ ಯಾವುದು ?

ಡಾ॥ ಆರ್. ನಾಗನಗೌಡ.—ತಾವು ಆ ಜಿಲ್ಲೆಯವರು, ಈ ವಿಚಾರ ತಮಗೆ ಗೊತ್ತಿಲ್ಲವೇ ?

ಶ್ರೀ ಬಿ. ಎಚ್. ಬೋರಣ್ಣಗೌಡ.—ಚನ್ನರಾಯಪಟ್ಟಣ ಮತ್ತು ಅಲೂರಿನ ಅರ್ಧಭಾಗ ಆ ಪ್ರದೇಶ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಇರಬಹುದು.

ಶ್ರೀ ಬಿ. ಎಕ್. ಬೋರಣ್ಣಗೌಡ.—ಆ ಪ್ರದೇಶದಲ್ಲಿ ಭಾವಿ ತೆಗಿಸಿಕೊಡಿ, ಅದು ಮಳೆಯ ಅಭಾವಕ್ಕೆ ಸಿಕ್ಕದ ಪ್ರದೇಶ ಎಂದು ಅರ್ಜಿಗಳು ಬಂದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಬಂದಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಆ ಕೆಲಸವನ್ನು ಜಾಗ್ರತೆಯಾಗಿ ಮಾಡಿಸಿಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—" ಸಿ " ಭಾಗದ ಉತ್ತರದಲ್ಲಿ 33 ಅಂದಾಜುಗಳನ್ನು ಮಂಜೂರು ಮಾಡಿರುವುದಾಗಿ ತಿಳಿಸಿದ್ದೀರಿ. ಅದು ಯಾವಾಗ ಮಂಜೂರಾಯಿತು ?

ಡಾ॥ ಆರ್. ನಾಗನಗೌಡ.—ಆ information ಇಲ್ಲಿ ಸಿದ್ಧವಾಗಿಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಮಂಜೂರಾಗಿರುವವುಗಳ ಪೈಕಿ ಯಾವ ಯಾವ ಕೆಲಸ ಪ್ರಾರಂಭಿಸಿದ್ದೀರಿ ?

ಡಾ॥ ಆರ್. ನಾಗನಗೌಡ.—ಕೆಲಸ ಯಾವ ಘಟ್ಟದಲ್ಲಿದೆ ಎಂಬುದನ್ನು ತಿಳಿಸಲು information ಸಿದ್ಧವಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶವನ್ನು ಬಿಟ್ಟರೆ ಉಳಿದ ನಾಲ್ಕು ತಾಲ್ಲೂಕುಗಳೂ ಮೈದಾನ ಪ್ರದೇಶವೆಂದು ಹೇಳಿದರೆ ಒಪ್ಪುತ್ತೀರಾ ?

ಡಾ॥ ಆರ್. ನಾಗನಗೌಡ.—ಹೆಚ್ಚು ಕಡಮೆ ಚಿತ್ರದುರ್ಗಕ್ಕೆ ಸರಿಸಮವಾಗಿದೆಯೆಂದು ಹೇಳಬಹುದು.

ಶ್ರೀ ಬಿ. ಚಿಕ್ಕಣ್ಣ.—ಅಂದಾಜು ಮಂಜೂರಾಗಿದ್ದರೂ ಆ ಬಗ್ಗೆ ಕೆಲಸವೇಕೆ ಇನ್ನೂ ಆಗಿಲ್ಲ ?

ಡಾ॥ ಆರ್. ನಾಗನಗೌಡ.—ಜೂನ್ 30ರ ಒಳಗಾಗಿ ಕೇಂದ್ರ ಸರ್ಕಾರದಿಂದ ಒದಗಿರುವ ಹಣವನ್ನು ಖರ್ಚುಮಾಡಬೇಕಾಗಿದೆ. ಜಾಗ್ರತೆಯಾಗಿಯೇ ಕೆಲಸ ವಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕಿಗೆ ಸೇರಿದ ಅಮ್ಮನಹಳ್ಳಿ ಮುಂತಾದ ಕೆಲವು ಗ್ರಾಮಗಳಿಗೆ ಅಂದಾಜು ಆಗಿ ಮಂಜೂರಾಗಿದೆಯೇ ?

ಡಾ॥ ಆರ್. ನಾಗನಗೌಡ.—ಆ ಬಗ್ಗೆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಇದು distress area ಎಂದು ಪರಿಗಣಿಸಲ್ಪಟ್ಟಿದೆಯೆಂಬುದನ್ನು ಗಮನಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

Supply of Electric Power to Villages.

Q.—62. **Sri B. RACHAIAH** (Yelandur—Scheduled Castes).—

Will the Government be pleased to state :—

(*a*) the names of villages to which electricity has been supplied for the last two years (talukwar information may kindly be furnished) ;

(*b*) the names of villages the estimates of which have been sanctioned and work execution order has not been given (talukwar information may be furnished) ;

(*c*) the names of villages the estimates of which are pending sanction (talukwar information may be furnished) ?

A.—**Dr. R. NAGAN GOWDA** (Minister for Agriculture).—

(*a*) List 'A' appended below.

(*b*) For all sanctioned works, work orders have been assigned.

(*c*) List 'B' appended below.